**ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ. 734/2023**

| | | |
|---|---|---|
| ಹೆಸರು | ರೇಣುಕಾ | PW -1 |
| ಗಂಡನ ಹೆಸರು | ಬಸವರಾಜಪ್ಪ | CW -1 |
| ವಯಸ್ಸು | 50 ವರ್ಷ | |
| ಉದ್ಯೋಗ | ಗೃಹಿಣಿ | ದಿನಾಂಕಃ 14.11.2024 |
| ವಾಸ | ಗಂಗನರಸಿ ಗ್ರಾಮ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಚಾಸಾ 2 ಮತ್ತು 3 ರವರ ಪರಿಚಯ ಇದೆ. ಚಾಸಾ 4 ನನ್ನ ಮೈದುನ. ಮೃತ ಬಸವರಾಜ ನನ್ನ ಗಂಡ. ಕಳೆದ 3-4 ವರ್ಷಗಳ ಹಿಂದೆ ನಾನು ಹೊಟೇಲ್ ನಲ್ಲಿ ಕೆಲಸ ಮಾಡುತ್ತಿದ್ದಾಗ ಚಾಸಾ 4 ನನ್ನ ಮೈದುನ ನನಗೆ ದೂರವಾಣಿ ಕರೆ ಮಾಡಿ ನನ್ನ ಗಂಡ ಬಸವರಾಜ ರವರಿಗೆ ಗುತ್ತೂರ ಕೆ ಇ ಬಿ ಗ್ರಿಡ್ ಹತ್ತಿರ ಅಪಘಾತವಾಗಿದೆ ಎಂದು ತಿಳಿಸಿದರು. ನಂತರ ಸ್ಥಳಕ್ಕೆ ಹೋಗಿ ನೋಡಲಾಗಿ, ನನ್ನ ಗಂಡ ಒಂದು ಲಾರಿ ಕೆಳಗಡೆ ಬಿದಿದ್ದು, ಸದರಿ ಅಪಘಾತದಲ್ಲಿ ಎದೆಗೆ, ತಲೆಗೆ, ಕಾಲುಗಳಿಗೆ ಪೆಟ್ಟು ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಸದರಿ ಅಪಘಾತವು ಲಾರಿಯು ಹಿಂದಿನಿಂದ ವೇಗವಾಗಿ ಬಂದು ಬೈಕಿಗೆ ಡಿಕ್ಕಿ ಪಡಿಸಿದ್ದರಿಂದ ಆಗಿರುತ್ತದೆ. ಆದರೆ ಯಾರ ತಪ್ಪಿನಿಂದ ಮತ್ತು ಯಾವ ರೀತಿ ಅಪಘಾತವಾಗಿದೆ ಎಂದು ನನಗೆ ಗೊತ್ತಿಲ್ಲ.

ಸದರಿ ಅಪಘಾತದಲ್ಲಿ ಮೊದಲು ಇನ್ನೊಂದು ಬೈಕ್ ನಲ್ಲಿ ನಾಗರಾಜ ಮತ್ತು ಇನ್ನೊರ್ವ ವ್ಯಕ್ತಿಗೆ ಬರುತ್ತಿರುವಾಗ ಲಾರಿಯು ಡಿಕ್ಕಿ ಪಡಿಸಿದ್ದು, ನಂತರ ನನ್ನ ಗಂಡ ಚಲಾಯಿಸುತ್ತಿದ್ದ ಬೈಕಿಗೆ ಡಿಕ್ಕಿ ಪಡಿಸಿ ಲಾರಿಯು ಪಲ್ಟಿಯಾಗಿರುತ್ತದೆ. ಡಿಕ್ಕಿ ಪಡಿಸಿದ ಲಾರಿಯು ಅಲ್ಲಿಯೇ ಇತ್ತು. ನನ್ನ ಗಂಡ ಚಲಾಯಿಸುತ್ತಿದ್ದ ಬೈಕಿನ ನಂಬರ ಮತ್ತು ಡಿಕ್ಕಿ ಪಡಿಸಿದ ಲಾರಿಯ ನಂಬರ ನನಗೆ ಗೊತ್ತಿಲ್ಲ. ಅಪಘಾತಕ್ಕೊಳಗಾದ ಇಬ್ಬರು ವ್ಯಕ್ತಿಗಳು ಹರಿಹರದ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿರುತ್ತಾರೆ.

ಅದೇ ದಿನ ಅಪಘಾತದ ವಿಚಾರವಾಗಿ ಠಾಣೆಗೆ ಹೋಗಿ ದೂರು ಸಲ್ಲಿಸಿರುತ್ತೇನೆ. ಸಾಕ್ಷಿಯ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸದರಿ ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ದೂರಿಗೆ ಅನುಗುಣವಾಗಿ ಮಾರನೇ ದಿನ ಪೊಲೀಸರು ಸ್ಥಳಕ್ಕೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಮಹಜರ ಮಾಡಿ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ. ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿ, ಅವು ಸ್ಥಳ ಪಂಚನಾಮೆ ಮತ್ತು ಕಚ್ಚಾ ನಕಾಶೆ ಆಗಿದ್ದು, ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ 2 ಮತ್ತು ನಿಪಿ 3 ಎಂದು ಸಾಕ್ಷಿಯ ಸಹಿಗಳನ್ನು ನಿಪಿ 2(ಎ) ಮತ್ತು ನಿಪಿ 3(ಎ) ಎಂದು ಗುರುತಿಸಲಾಯಿತು. ಛಾಯಾತಚ್ರಿಗಳನ್ನು ನಿಪಿ 4 ಮತ್ತು 5 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು

ದಾಖಲೆಯನ್ನು ತೋರಿಸಲಾಗಿ ಅದು ವಾಹನ ಪಂಚನಾಮೆ ಆಗಿದ್ದು, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ 6(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ 6 ಛಾಯಾಚಿತ್ರಗಳನ್ನು ತೋರಿಸಲಾಗಿ, ಅವುಗಳಲ್ಲಿ 5 ಛಾಯಾಚಿತ್ರಗಳಲ್ಲಿ ತಾನು ಇರುವುದಾಗಿ ನೋಡು ಗುರುತಿಸಿದ್ದು, ಮತ್ತೊಂದು ಛಾಯಾಚಿತ್ರವನ್ನು ನಿಪಿ 6 ಜರುಗಿಸುವ ಕಾಲಕ್ಕೆ ತೆಗೆಯಲಾಗಿರುತ್ತದೆ. ಸದರಿ ಛಯಾಚಿತ್ರಗಳನ್ನು ನಿಪಿ 7 ರಿಂದ 12 ಎಂದು ಗುರುತಿಸಲಾಯಿತು. ಪೊಲೀಸರು ನಿಪಿ 2 ಮತ್ತು 6 ನ್ನು ಜರುಗಿಸುವ ಕಾಲಕ್ಕೆ ಚಾಸಾ 2 ಮತ್ತು 3 ರವರು ಸಹ ಇದ್ದರು. ನಾನು ಪ್ರಕರಣದ ಬಗ್ಗೆ ಪೊಲೀಸರ ಮುಂದೆ ಮರು ಹೇಳಿಕೆ ನೀಡಿದ್ದೇನೆ.

(ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಸಲು ಮಾನ್ಯ ಎ.ಪಿ.ಪಿ ಯವರು ಕೋರಿದ್ದು, ಸಂಗತಿಗಳನ್ನು ಪರೀಶಿಲಿಸಲಾಗಿ ಭಾಗಷಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟಿ ಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲು ಶ್ರೀ ಎ.ಪಿ.ಪಿ. ಯವರಿಂದಃ**

ದಿನಾಂಕ 06.05.2023 ರಂದು ಮಧ್ಯಾಹ್ನ 2.00 ಗಂಟೆ ಸುಮಾರಿಗೆ ಒಂದು ಗೂಡ್ಸ ಲಾರಿ ಸಂಖ್ಯೆ ಕೆ ಎ 17 ಎಎ 2404 ಲಾರಿಯ ಚಾಲಕ ತನ್ನ ಲಾರಿಯನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ನನ್ನ ಗಂಡನ ಬೈಕಿನ ಹಿಂದೆ ನಮ್ಮ ಗ್ರಾಮದ ಮಹೇಶ ಮತ್ತು ಚಂದ್ರಪ್ಪ ರವರು ಹೋಗುತ್ತಿದ್ದ ಕೆ ಎ 17 ಇವೈ 4594 ಬೈಕಿಗೆ ಡಿಕ್ಕಿ ಪಡಿಸಿದ ನಂತರ ಮುಂದೆ ಹೋಗುತ್ತಿದ್ದ ನನ್ನ ಗಂಡನ ಬೈಕಿಗೆ ಡಿಕ್ಕಿ ಪಡಿಸಿ, ಅಪಘಾತವಾಗಿರುತ್ತದೆ ಎಂದರೆ ಸರಿ.

ದಿನಾಂಕ 07.05.2023 ರಂದು ಪೊಲೀಸರು ಗ್ರಾಮಾಂತರ ಠಾಣಾ ಆವರಣದಲ್ಲಿರುವ ಕೆ ಎ 17 ಎಎ 2404 ಲಾರಿ, ಕೆ ಎ 17 ಇವೈ 4594 ಮತ್ತು ಕೆಎ 17 ಇಪಿ 5759 ಬೈಕುಗಳನ್ನು ಐ ಎಂ ವಿ ತಪಾಸಣೆಗಾಗಿ ನನ್ನ, ಚಾಸಾ 2 ಮತ್ತು 3 ರವರ ಸಮಕ್ಷಮ ತಮ್ಮ ವಶಕ್ಕೆ ಪಡೆದರು ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ವಿ ಎಂ ವಕೀಲರಿಂದಃ**

ಚಾಸಾ 2 ಮತ್ತು 3 ರವರು ಸಬಂಧಿಕರು ಎಂದರೆ ಸರಿ. ಚಾಸಾ 6 ಮತ್ತು 7 ರವರು ನನ್ನ ಗಂಡನ ಸ್ನೇಹಿತರು ಎಂದರೆ ಸರಿ. ಅಪಘಾತವಾದ ರಸ್ತೆಯಲ್ಲಿ ಸಾಕಷ್ಟು ವಾಹನಗಳ ಸಂಚಾರ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯು ತಗ್ಗು ಗುಂಡಿಗಳಿಂದ ಮತ್ತು ತಿರುವಿನಿಂದ ಕೂಡಿದೆ ಎಂದರೆ ಸರಿ. ಅಪಘಾತದ ಸ್ಥಳದಿಂದ ಹರಿಹರಕ್ಕೆ ಬರಬೇಕಾದರೆ ಗ್ರಾಮಾಂತರ ಠಾಣೆಯನ್ನು ಮುಂದೆ ಹಾದು ಬರಬೇಕು ಎಂದರೆ ಸರಿ. ಅಪಘಾತವಾದ ನಿಖರವಾದ ದಿನಾಂಕ, ತಿಂಗಳು ಮತ್ತು ಇಸವಿ ಹೇಳಲು ಆಗುವುದಿಲ್ಲ ಎಂದರೆ ಸರಿ. ನನಗೆ ದೂರವಾಣಿ ಕರೆ ಮಾಡಿ ತಿಳಿಸಿದ ದೂರವಾಣಿ ಸಂಖ್ಯೆ ನನಗೆ ಗೊತ್ತಿಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನಿಪಿ 1 ನ್ನು ಪೊಲೀಸರು ಹೇಳಿ ಬರೆಸಿರುತ್ತಾರೆ. ನಿಪಿ 1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಗಂಡ ಮದ್ಯಪಾನ ಮಾಡುತ್ತಿದ್ದರು ಎಂದರೆ ಸರಿ. ಅಪಘಾತವಾಗಿದೆ ಎಂದು ಹೇಳಲಾದ ದಿನ ನನ್ನ ಗಂಡ ಮತ್ತು ಚಾಸಾ 6 ಮತು 7 ರವರು ಮದ್ಯಪಾನ

ಮಾಡಿ ಎರಡು ಬೈಕಿನಲ್ಲಿ ಮಾತನಾಡುತ್ತಾ ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನ ತಪ್ಪಿನಿಂದ ಅಪಘಾತವಾಗಿದ್ದರೂ ಸಹ ಲಾರಿ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನಿಪಿ 2 ಮತ್ತು 3 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದು, ಅವುಗಳಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ಹೇಳಿದ ಮೇರೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ.

ನನ್ನ ಗಂಡನ ಅಪಘಾತದಿಂದ ಮೃತರಾಗಿದ್ದಾರೆ ಎಂದು ಪರಿಹಾರವನ್ನು ಕೋರಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ಆರೋಪಿತನ ತಪ್ಪಿನಿಂದ ಅಪಘಾತವಾಗದಿದ್ದರೂ ಸಹ ಆರೋಪಿತನ ವಿರುದ್ಧ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮರು ಹೇಳಿಕೆಯನ್ನು ಯಾವ ದಿನಾಂಕ ತಿಂಗಳು ಮತ್ತು ಇಸವಿಯಲ್ಲಿ ನೀಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ,ಹರಿಹರ.